ಮಾಡಬೇಕೆಂದು ಕೇಳುತ್ತಿಲ್ಲ. ಯಾವ ರೀತಿಯಲ್ಲಿ ರೈಲ್ವೆ ಮತ್ತು ಏರ್‌ಲೈನ್ಸ್‌ನಲ್ಲಿ ಮಾಡುತ್ತಿದ್ದಾರೆ ಅದೇ ಸಿಸ್ಟಂ ಅನ್ನು ಇಲ್ಲಿ ಅಳವಡಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಆ ತರಹ ಯೋಜನೆ ಮಾಡಿದ್ದೀರಾ ಎಂದು ಪ್ರಶ್ನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಸಾರಿಗೆ ಸಂಸ್ಥೆ ವತಿಯಿಂದ ಮಂಗಳೂರು ಮೈಸೂರು, ಬೆಂಗಳೂರು, ಹುಬ್ಬಳ್ಳಿ ಇಂತಹ ಪ್ರಮುಖ ಪಟ್ಟಣಗಳಿಗೆ ಸೆಟಲೈಟ್ ಮೂಲಕವಾಗಿ ರಿಸರ್ವೇಷನ್ ಮಾಡಬೇಕೆನ್ನತಕ್ಕ ಕಾರ್ಯಕ್ರಮವನ್ನು ಈ ವರ್ಷ ನಾವು ಇಟ್ಟುಕೊಂಡಿದ್ದೇವೆ. ಅದು ಆಗುತ್ತದೆ, ಮಾನ್ಯ ಸದಸ್ಯರು ಹೇಳಿದಹಾಗೆ ರಿಟರ್ನ್‌ಜರ್ನಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ತಾತ್ಕಾಲಿಕವಾಗಿ ಬೆಂಗಳೂರಿಗೆ ಬೇರೆ ಕಡೆಗೆ ಹೋಗಲಿಕ್ಕೆ ರಿಸರ್ವೇಷನ್ ಮಾಡಲಿಕ್ಕೆ ದೂರವಾಣಿ ಮೂಲಕ ಮಾಡಲಿಕ್ಕೆ ಇವರು ಪ್ರಶ್ನೆ ಕೇಳಿದ ಮೇಲೆ ಅವಕಾಶ ಮಾಡಿಕೊಡಲಾಗಿದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಕನಿಷ್ಟ ಶಾಸಕರಭವನದಲ್ಲಿರುವ ರಿಸರ್ವೇಷನ್ ಕೌಂಟರಿನಿಂದ ಇಂತಹ ಏನಾದರೂ ವ್ಯವಸ್ಥೆ ಮಾಡಿದರೆ ಒಳ್ಳೆಯದು. ಅನೇಕ ಸಂದರ್ಭಗಳಲ್ಲಿ ಶಾಸಕರು ರಿಸರ್ವೇಷನ್ ಮಾಡಿ ಬಸ್ ಹತ್ತಲಿಕ್ಕೆ ಹೋದಾಗ ಅನೇಕ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಅಂದರೆ ಶಾಸಕರಿಗಾಗಿ ಇರುವ ಸೀಟುಗಳನ್ನು ಬೇರೆ ಯಾರಿಗೋ ಕೊಟ್ಟಿರುತ್ತಾರೆ. ಇಲ್ಲಿ ನೋಟ್ ಮಾಡಿರುತ್ತಾರೆ, ಆದರೆ ನಿಶ್ಚಿತವಾಗಿ ಕಂಪ್ಯೂಟರ್ ಮೂಲಕ ಏನಾದರೂ ವ್ಯವಸ್ಥೆಯನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

SRI P.G.R. SINDHIA : It includes Legislator's reservation also.

ಬಿಜಾಪುರ ಜಿಲ್ಲೆಯ ಜಲ್ಲಿಯಲ್ಲಿ ಮೋಟಾರ್ ವಾಹನಗಳ ನಿರೀಕ್ಷಕರ ಕಾರ್ಯನಿರ್ವಹಣೆ

366 - ಶ್ರೀ ಹೆಚ್. ಎನ್. ನಂಜೇಗೌಡ (ಬಸವನಗುಡಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬಿಜಾಪುರ ಜಿಲ್ಲೆಯ ಝಲ್ಕಿ ಮೋಟಾರು ವಾಹನ ತನಿಖಾ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹಿರಿಯ ಮತ್ತು ಮೋಟಾರು ವಾಹನ ನಿರೀಕ್ಷಕರ ಸಂಖ್ಯೆ ಎಷ್ಟು?*

2. *ಮೇಲ್ಕಂಡ ಮೋಟಾರು ವಾಹನ ತನಿಖಾ ಠಾಣೆಯಲ್ಲಿ ಬಿಜಾಪುರ ಸಾರಿಗೆ ಕಛೇರಿಯಿಂದ ನಿಯೋಜಿಸಲ್ಪಟ್ಟ ಹಿರಿಯ ಮತ್ತು ಮೋಟಾರು ವಾಹನ ನಿರೀಕ್ಷಕರುಗಳ ಸಂಖ್ಯೆ ಎಷ್ಟು?*

3. *ಕಳೆದ ಆರು ವರ್ಷಗಳಿಂದ ಬಿಜಾಪುರ ಕಛೇರಿಯಿಂದ ನಿಯೋಜಿಸಲ್ಪಟ್ಟ ಹಿರಿಯ ಮತ್ತು ಮೋಟಾರು ವಾಹನ ನಿರೀಕ್ಷಕರುಗಳು ಮೇಲ್ಕಂಡ ತನಿಖಾ ಠಾಣೆಯಲ್ಲಿ ಸತತವಾಗಿ ಕೆಲಸ ನಿರ್ವಹಿಸಲು ಕಾರಣಗಳೇನು?*

4. *ಈ ತನಿಖಾ ಠಾಣೆಯಲ್ಲಿ ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಹಿರಿಯ ಮತ್ತು ಮೋಟಾರು ವಾಹನ ನಿರೀಕ್ಷಕರುಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಬೇರೆ*

ಕಡೆಗೆ ವರ್ಗಾಯಿಸಿ ಈ ತನಿಖಾ ಠಾಣೆಗೆ ಬೇರೆ ಜಾಗಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ವರ್ಗಾಯಿಸಲು ಸರ್ಕಾರ ಕ್ರಮಕೈಗೊಳ್ಳುತ್ತಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಝುಲ್ಕಿ ತನಿಖಾ ಠಾಣೆಯಲ್ಲಿ 8 ಜನ ಹಿರಿಯ ಮೋಟಾರು ವಾಹನ ನಿರೀಕ್ಷಕರು ಮತ್ತು 4 ಜನ ಕಿರಿಯ ಮೋಟಾರು ವಾಹನ ನಿರೀಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಆ) ಝುಲ್ಕಿ ತನಿಖಾ ಠಾಣೆಯಲ್ಲಿ ಶಾಶ್ವತ ಸಿಬ್ಬಂದಿ ಇಲ್ಲಿದಿರುವುದರಿಂದ ಹಿರಿಯ ಮೋಟಾರು ವಾಹನ ನಿರೀಕ್ಷಕರು 8 ಮತ್ತು 4 ಕಿರಿಯ ಮೋಟಾರು ವಾಹನ ನಿರೀಕ್ಷಕರನ್ನು ಸರದಿಯ ಪ್ರಕಾರ ನಿಯೋಜಿಸಲಾಗುತ್ತಿದೆ.

ಇ) ಝುಲ್ಕಿ ತನಿಖಾ ಠಾಣೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹಿರಿಯ ಮೋಟಾರು ವಾಹನ ನಿರೀಕ್ಷಕರು ಮತ್ತು ಕಿರಿಯ ಮೋಟಾರು ವಾಹನ ನಿರೀಕ್ಷಕರುಗಳಲ್ಲಿ ಕೆಲವರನ್ನು ಕಳೆದ ಎರಡು ವರುಷಗಳಿಂದ ವರ್ಗಾವಣೆ ನಿರ್ಭಂದತೆ ಇದ್ದುದರಿಂದ, ವರ್ಗಾವಣೆ ಮಾಡಲು ಆಗಿಲ್ಲವಾಗಿ ಕರ್ತವ್ಯ ನಿರ್ವಹಹಿಸುತ್ತಿದ್ದಾರೆ.

ಈ) ಇತ್ತೀಚೆಗಷ್ಟೆ ಸರ್ಕಾರವು ವರ್ಗಾವಣೆ ಸೂಚನೆಗಳನ್ನು ಹೊರಡಿಸಿದ್ದು, ಅದರಂತೆ ಹಲವಾರು ವರ್ಷದಿಂದ ಕೆಲಸ ನಿರ್ವಹಿಸುತ್ತಿರುವ ಹಿರಿಯ ಮತ್ತು ಕಿರಿಯ ಮೋಟಾರು ವಾಹನ ನಿರೀಕ್ಷಕರುಗಳನ್ನು ಬೇರೆ ಕಡೆ ವರ್ಗಾಯಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಅಂದರೆ ಇನ್ಸ್‌ಪೆಕ್ಟರ್ ಆಫ್ ಮೋಟಾರ್ ವೆಹಿಕಲ್ಸ್ ಒಂದೇ ಜಾಗದಲ್ಲಿ ಅವರೇ ಖಾಯಂ ಆಗಿರುತ್ತಾರೆ. ಆರೇಳು ವರ್ಷ ಅಲ್ಲೇ ಇರುತ್ತಾರೆ. ಕಾರಣ ಏನೆಂದರೆ ಕವೆಟೆಡ್ ಪ್ಲೇಸ್. ಪ್ರತಿ ದಿನ 10-12 ಸಾವಿರ ವಾಹನಗಳು ಹೋಗುತ್ತವೆ. ಅದ್ದರಿಂದ ಅಂತಹ ಸ್ಥಳದಲ್ಲಿ ಕೊನೆಯ ಪಕ್ಷ ಎರಡು ವರ್ಷದ ಮೇಲೆ ಯಾರನ್ನೂ ಇಡಬೇಡಿ. ಇಷ್ಟು ಕ್ರಮ ಕೈಗೊಳ್ಳುತ್ತೇವೆಂದು ಹೇಳಿದರೆ ಸಾಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಸಾರಿಗೆ ಮಂತ್ರಿಯಾದ ಮೇಲೆ ವರ್ಗಾವಣೆ ಮಾಡಲಿಕ್ಕೆ ಅವಕಾಶ ಇದ್ದದ್ದು ಕಳೆದ ವರ್ಷ ಒಂದೇ ಸಾರಿ. Not a single transfer I have made because of the ban on transfer. For this year, ಏನು ಗೈಡ್‌ಲೈನ್ಸ್ ಕೊಟ್ಟಿದ್ದಾರೆ, ಮುಖ್ಯಮಂತ್ರಿಗಳು, ಡಿಪಿಎಆರ್ ನವರು ಏನು ಹೇಳಿದ್ದಾರೆ, ಅದನ್ನು ಬಿಟ್ಟು ಒಂದು ಇಂಚು ಹೆಚ್ಚು ಕಡಿಮೆಯಾಗದ ಹಾಗೆ ವ್ಯವಸ್ಥೆ ಮಾಡಿ ಜಲಕಿ ಚೆಕ್‌ಪೋಸ್ಟ್ ಅಷ್ಟೇ ಅಲ್ಲ, ರಾಜ್ಯದಲ್ಲಿರುವ ಎಲ್ಲಾ ಚೆಕ್‌ಪೋಸ್ಟ್‌ಗಳಿಗೆ ಅದನ್ನೇ ಅನ್ವಯ ಮಾಡುತ್ತೇನೆ.

ಅಧ್ಯಕ್ಷರು : ವಿಶ್ವೇಶ್ವರ ಹೆಗಡೆಯವರೆ, ಮಂತ್ರಿಗಳ ತಮ್ಮ ಪ್ರಶ್ನೆಗೆ ಉತ್ತರ ಹೇಳಲಿಕ್ಕೆ ಸಮಯ ಕೇಳಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಬರುವುದೇ ಅಪರೂಪ. ಅದು ಬಂದಂತಹ ಸಂದರ್ಭದಲ್ಲಿ ಸಮಯ ಕೇಳಿಬಿಟ್ಟರೆ ನಮ್ಮ ಪರಿಸ್ಥಿತಿ ಏನು? ಸಿಂಪಲ್ ಪ್ರಶ್ನೆ ಇದೆ. ಬಹಳ ಕಠಿಣವಾದುದ್ದಲ್ಲ. ರಾಜ್ಯದ ಎಲ್ಲಾ ಕಡೆಯಿಂದ ಹುಡುಕಿ ಉತ್ತರ ತರಿಸಬೇಕಾದ್ದು ಏನೂ ಇಲ್ಲ. ಇಲಾಖೆಯಲ್ಲಿ ಇಲ್ಲಿಯೇ ಸಿಗುವಂತಹದ್ದು. ಬಹಳ ಹಗುರವಾದ ಪ್ರಶ್ನೆ ಇದೆ. ಪ್ರಶ್ನೆ ಬಹಳ ಸರಳವಾದುದಾಗಿದೆ.

ಅಧ್ಯಕ್ಷರು : ಏನೋ ಗ್ರಹಗತಿ ವ್ಯತ್ಯಾಸವಿರಬೇಕು ನೋಡೋಣ. ತಾವು ಪ್ರಶ್ನೆ ಹಾಕಿದ್ದೀರಿ ಅವರು ಸಮಯ ಕೇಳಿದ್ದಾರೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಧ್ಯಕ್ಷರೇ, ತಾವು ನೋಡಿದರೆ ಗೊತ್ತಾಗುತ್ತದೆ ಪ್ರಶ್ನೆ ಎಷ್ಟು ಸರಳವಾಗಿದೆಯೆಂದು. ಅದರ ಅಂಕಿಸಂಖ್ಯೆಯನ್ನು ರಾಜ್ಯದಿಂದ ಸಂಗ್ರಹಿಸಬೇಕಾದದ್ದು ಏನೂ ಇಲ್ಲ. ಅಂಕೋಲ ಕ್ಷೇತ್ರದಲ್ಲಿ ಯಲ್ಲಾಪುರ ಮತ್ತು ಅಂಕೋಲಗಳಲ್ಲಿ ಮನೆ ಬೇಕೆನ್ನುವ ಬೇಡಿಕೆಯಿದೆ. ಜಾಗ ಸಹ ಇದೆ. ಈ ಹಿನ್ನೆಲೆಯಲ್ಲಿ ಮನೆ ಕಟ್ಟುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆನ್ನುವುದು ಬೇಕು ಅಷ್ಟೆ.

ಅಧ್ಯಕ್ಷರು : ನಾಳೆ ನಾಡಿದ್ದರಲ್ಲಿ ಯಾವಾಗಲಾದರೂ ತಡೆಹಿಡಿಯಲಾದ ಪ್ರಶ್ನೆಗಳಲ್ಲಿ ಸೇರಿಸಿಕೊಳ್ಳಲಾಗುವುದು.

ವರ್ತೂರು ಕ್ಷೇತ್ರದಲ್ಲಿ ಹುಡ್ಕೋ ಯೋಜನೆ.

368 - ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯಿಂದ ಹುಡ್ಕೋ ಸಾಲದ ಯೋಜನೆಯಲ್ಲಿ ಗಜೇಂದ್ರ ನಗರದಲ್ಲಿ ನಿರ್ಮಿಸಿರುವ ಮನೆಗಳು ಎಷ್ಟು?*

ಆ) *ಅವುಗಳಲ್ಲಿ ಅಧಿಕೃತವಾಗಿ ಎಷ್ಟು ಮನೆಗಳನ್ನು ಹಂಚಲಾಗಿರುತ್ತದೆ. ಹಂಚದೆ ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು? ಅಕ್ರಮವಾಗಿ ವಾಸಿಸುತ್ತಿರುವವರ ಮನೆಗಳು ಎಷ್ಟು?*

ಇ) *ಮೊದಲನೇ ಹಂತದಲ್ಲಿ ಕಟ್ಟಿದ ಮನೆಗಳ ನಿರ್ಮಾಣದ ವೆಚ್ಚವಷ್ಟು, 2ನೇ ಹಂತದಲ್ಲಿ ಕಟ್ಟಿದ ನಿರ್ಮಾಣದ ವೆಚ್ಚ ಎಷ್ಟು?*

ಈ) *ಈ ಮನೆಗಳಲ್ಲಿ ವಾಸಿಸುವವರು ಸಾಲ ಕಟ್ಟಲು ಶಕ್ತಿ ಇಲ್ಲದೆ ಮನ್ನಾ ಮಾಡಬೇಕೆಂತಲೂ ಅಥವಾ ಕಡಿಮೆ ಮಾಡಬೇಕೆಂದು ಕೋರಿರುತ್ತಾರೆಯೇ ಸರ್ಕಾರವು ಈ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ಗಜೇಂದ್ರನಗರ ಕೊಳಚೆ ಪ್ರದೇಶದಲ್ಲಿ ಹುಡ್ಕೋ ಸಾಲದ ನೆರವಿನಿಂದ ಮಂಡಳಿಯು